**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹೊಸಕೋಟೆ**

**ಸಿ.ಸಿ. ನಂ.337/2018**

| | | |
|---|---|---|
| ಹೆಸರು | ಎಸ್ .ಆರ್.ಮಂಜುನಾಥ್ | ಪ್ರಾ.ಸಾ.2 |
| ತಂದೆ ಹೆಸರು | ರಾಮೇ ಗೌಡ | ಚಾ.ಸಾ.18 |
| ವಯಸ್ಸು | 44 ವರ್ಷ | |
| ಕೆಲಸ | ಪಿ.ಐ | ಸಾ.ಪ್ರ.ವ.ಬೋ |
| ಹಾಲಿ ವಾಸ | ಹೊಸಕೋಟೆ | ದಿ:-21.06.2024 |

**ಮುಖ್ಯ ವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :-**

ನಾನು 2017 ರಿಂದ 2019 ವರೆಗೆ ನಂದಗುಡಿ ವೃತ್ತ ನಿರೀಕ್ಷಕನಾಗಿ ಕಾರ್ಯ ನಿರ್ವಹಿಸಿರುತ್ತೇನೆ.

ದಿ:21.12.2027 ರಂದು ಚಾ.ಸಾ.2 ರವರ ಹೇಳಿಕೆಯನ್ನು ಪಡೆದಿರುತ್ತೇನೆ. ದಿ:23.01.2018 ರಂದು ಅಪಘಾತ ಪಡಿಸಿದ ಲಾರಿ ಟಿ.ಎನ್.73-ಜೆ.3114 ಠಾಣಾ ಆವರಣದಲ್ಲಿ ಅದನ್ನು ಅಮಾನತ್ತುಪಡಿಸಿಕೊಂಡು, ಪಂಚರ ಸಮಕ್ಷಮ ಅಮಾನತ್ತು ಪಂಚನಾಮೆಯನ್ನು ಜರುಗಿಸಿ ಠಾಣ ಮಾಲುಪಟ್ಟಿಗೆ ಅಳವಡಿಸಿಕೊಂಡಿರುತ್ತೇನೆ. ದಿ:24.01.2018 ಚಾ.ಸಾ.11 ರವರಿಗೆ ಕಲಂ.133 ರಡಿಯಲ್ಲಿ ನೋಟಿಸ್ ನೀಡಿರುತ್ತೇನೆ. ಅದರಂತೆ ಅವರು ಆರೋಪಿ ಸಚಿನ್ ನನ್ನು ಠಾಣೆಗೆ ಹಾಜರುಪಡಿಸಿದ್ದು, ಅವರ ವಿರುದ್ದ ದಸ್ತಗಿರಿ ಕ್ರಮ ಕೈಗೊಂಡು ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ಅದೇ ದಿನ ಚಾ.ಸಾ.11 ರವರಿಗೆ ಇಂಡಿನಿಮಿನಿಟಿ ಬಾಂಡ್ ಪಡೆದು ಸದರಿ ವಾಹನವನ್ನು ಬಿಡುಗಡೆ ಮಾಡಿರುತ್ತೇನೆ. ದಿ:28.02.2018 ರಂದು ಐ.ಎಂ.ವಿ ವರದಿ ಪಡೆದು, ಅದೇ ದಿನ ತನಿಖೆ ಪೂರ್ಣಗೊಳಿಸಿ ಆರೋಪಿಯ ವಿರುದ್ದ ಸಾಕಷು ಸಾಕ್ಷ್ಯಾದಾರಗಳು ಕಂಡು ಬಂದ ಕಾರಣ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

ಸಾಕ್ಷಿ ನಿ.ಪಿ.3 ರ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.3(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ಐ.ಎಂ.ವಿ ವರದಿ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ವರದಿಯನ್ನು ನಿ.ಪಿ.5 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.5(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಕಲಂ.133 ರ

ನೋಟಿಸ್ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿ.ಪಿ.6 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.6(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಇಂಡಿಮಿನಿಟಿ ಬಾಂಡ್ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿ.ಪಿ.7 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.7(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಆರೋಪಿತರ ಪರ ವಕೀಲರಿಂದ:-**

ಚಾ.ಸಾ.2 ರವರಿಗೆ ಹೇಳಿಕೆ ನೀಡಲು ನೋಟಿಸ್ ನೀಡಿರುವುದಿಲ್ಲ. ಚಾ.ಸಾ.2 ರವರು ಯಾವುದೇ ಹೇಳಿಕೆ ನೀಡಿರುವುದಿಲ್ಲ, ಪ್ರಕರಣಕ್ಕೆ ತಕ್ಕಂತೆ ನಾನೇ ಹೇಳಿಕೆಯನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನಿ.ಪಿ.3 ಅನ್ನು ಜರುಗಿಸುವಾಗ ಸಾಕ್ಷಿಗಳಿಗೆ ಮಹಜರುಗೆ ಬರುಲು ನೋಟಿಸ್ ನೀಡಿರಲಿಲ್ಲ. ಚಾ.ಸಾ.1 ಮತ್ತು 5 ರವರು ಠಾಣೆಗೆ ತಮ್ಮ ವಾಹನವನ್ನು ಬಿಡಗಡೆಗೊಳಿಸಿಕೊಳ್ಳಲು ಬಂದಾಗ ನಾನು ನಿ.ಪಿ.3 ಕ್ಕೆ ಅವರ ಸಹಿ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಮಹಜರು ಸಮಯದಲ್ಲಿ ಪ್ರಕರಣಕ್ಕೆ ಸಂಬಂಧಪಟ್ಟರವರನ್ನು ಹೊರತುಪಡಿಸಿ ಬೇರೆಯವರು ಇರುತ್ತಾರೆ ಎಂದರೆ ಸರಿ. ಅಂತಹವರ ಸಹಿಯನ್ನು ನಿ.ಪಿ.3 ಕ್ಕೆ ಪಡೆದಿರುವುದಿಲ್ಲ. ನಾನು ನಿ.ಪಿ.3 ಅನ್ನು ಠಾಣೆಯಲ್ಲಿ ಕುಳಿತು ತಯಾರಿಸಿದ ಕಾರಣ ಠಾಣೆಗೆ ಬಂದಿದ್ದ, ಚಾ.ಸಾ.1 ಮತ್ತು 5 ರವರ ಸಹಿಯನ್ನು ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಪ್ರಸ್ತುತ ಪ್ರಕರಣದ ಅಪಘಾತವು ಅಪಘಾತ ಪಡಿಸಿದ ವಾಹನ ಪರಾರಿಯಾದ ಕಾರಣ ಅದನ್ನು ಪತ್ತೆ ಹಚ್ಚಿ ಅದರ ಮಾಲೀಕರಿಗೆ ನೋಟಿಸ್ ನೀಡಲು ತಡವಾಗಿರುತ್ತದೆ. ಸದರಿ ಕಾರಣವನ್ನು ನಿ.ಪಿ.6 ರಲ್ಲಿ ನಮೂದಿಸಿರುವುದಿಲ್ಲ ಎಂದರೆ ಸರಿ. ಪ್ರಸ್ತುತ ಪ್ರಕರಣದಲ್ಲಿ ನಾನು ಬಿಡುಗಡೆಗೊಳಿಸಿದ ವಾಹನಕ್ಕೂ ಪ್ರಕರಣಕ್ಕೂ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನಮಗೆ ಅಪಘಾತ ಪಡಿಸಿದ ವಾಹನ ಸಿಗದೇ ಇದ್ದಾಗ ಸದರಿ ಲಾರಿಯನ್ನು ಪ್ರಸ್ತುತ ಪ್ರಕರಣದಲ್ಲಿ ಸೇರಿಸಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಲಾರಿಯ ಪರೀಕ್ಷೆಗಾಗಿ ನೀಡಿರುವ ನಿವೇದನೆಯನ್ನು ಹಾಜರುಪಡಿಸಿರುವುದಿಲ್ಲ. ಸದರಿ ನಿವೇದನೆಯನ್ನು ನನ್ನ ಸಿಬ್ಬಂದಿ ಮೂಲಕ ಕಳುಹಿಸಿದ್ದು, ಅವರ ಹೆಸರನ್ನು ಹೇಳಿರುವುದಿಲ್ಲ. ನಿ.ಪಿ.5 ಅನ್ನು ಯಾರಿಂದ ಸ್ವೀಕರಿಸಿರುತ್ತೇನೆ ಎಂದು ನಮೂದಿಸಿರುವುದಿಲ್ಲ. ನಿ.ಪಿ.5 ರಲ್ಲಿ ಅದನ್ನು ಸ್ವೀಕರಿಸಿದ ದಿನಾಂಕವನ್ನು ನಮೂದಿಸುವಾಗ

ವರ್ಷವನ್ನು 2018 ಬದಲು 2017 ಎಂದು ನಮೂದಿಸಿರುತ್ತೇನೆ. ಪ್ರಸ್ತುತ ಪ್ರಕರಣದ ಆರೋಪಿಗೂ ಪ್ರಕರಣಕ್ಕೂ ಸಂಬಂಧವಿಲ್ಲದಿದ್ದರೂ ಆರೋಪಿಯ ವಿರುದ್ದ ಸುಳ್ಳು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು)**

**ಓ.ಹೇ.ಕೇ.ಸ.ಇದೆ**

**2ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,**
**ಹೊಸಕೋಟೆ.**